ಬೆಂಗಳೂರು ಮಾಗಡಿ ಮಧ್ಯೆ ಇರುವ ತಿಪ್ಪಗೊಂಡನಹಳ್ಳಿ ಸೇತುವೆ ಪೂರ್ಣಗೊಳಿಸುವುದು

489 (636) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಾಗಡಿ ಮುಖ್ಯ ರಸ್ತೆಯ ತಿಪ್ಪಗೊಂಡನಹಳ್ಳಿ ಸೇತುವೆ ಎಂದು ಪ್ರಾರಂಭಿಸಲಾಯಿತು; ಇದರ ರೂಪುರೇಷೆಗಳೇನು; ಇದನ್ನು ಎಂದು ಪೂರ್ಣಗೊಳಿಸಬೇಕಾಗಿತ್ತು;

ಆ) ಕಳೆದ ಎರಡೂ ಅಧಿವೇಶನಗಳಲ್ಲಿ ಕ್ರಮವಾಗಿ ಅಕ್ಟೋಬರ್ 2009 ಹಾಗೂ ಫೆಬ್ರವರಿ 2010ರ ಒಳಗಾಗಿ ಪೂರ್ಣಗೊಳಿಸಲಾಗುವುದೆಂದು ಸರ್ಕಾರ ಉತ್ತರ ನೀಡಿದ್ದು, ಇನ್ನೂ ಮುಗಿಯದೇ ಇರಲು ಕಾರಣಗಳೇನು;

ಇ) ಎಂದು ಈ ಸೇತುವೆಯನ್ನು ಪೂರ್ಣಗೊಳಿಸಿ ಸಂಚಾರಕ್ಕೆ ಮುಕ್ತಗೊಳಿಸಿಕೊಡಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಈ ಕಾಮಗಾರಿಗಳನ್ನು 3ನೇ ಹಂತದ ಸೇತುವೆ ಕಾಮಗಾರಿಗಳಲ್ಲಿ ತೆಗೆದುಕೊಳ್ಳಲಾಗಿದ್ದು, ಮೇ 2007 ರಲ್ಲಿ ಪ್ರಾರಂಭಿಸಲಾಗಿದೆ.

ಈ ಸೇತುವೆಯು 12 ಮೀ ಅಗಲ ಹಾಗೂ 18 ಮೀಗಳ 4 ಸ್ಪ್ಯಾನ್ ಗಳೊಂದಿಗೆ ಯೋಜಿತಗೊಂಡಿರುತ್ತದೆ. ಕಾಮಗಾರಿಯನ್ನು ಸೆಪ್ಟೆಂಬರ್ 2009ಕ್ಕೆ ಮುಗಿಸಬೇಕಾಗಿತ್ತು.

ಆ) ಈ ಸೇತುವೆಯ ಆರ್.ಸಿ.ಸಿ. ಸ್ಟ್ರಕ್ಚರ್ ಕಾಮಗಾರಿ ಈಗಾಗಲೇ ಮುಗಿದಿದ್ದು, ಎರಡೂ ದಿಕ್ಕಿನ ಕೂಡು ರಸ್ತೆಗಳ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಈ ಹಿಂದೆ ಒಪ್ಪಿದಂತೆ ಫೆಬ್ರವರಿ – 2010 ರೊಳಗೆ ಕಾಮಗಾರಿಯನ್ನು ಮುಗಿಸಬೇಕಿತ್ತು, ಆದರೆ ಕೂಡು ರಸ್ತೆಗಳ ನಿರ್ಮಾಣದಲ್ಲಿ ಉದ್ಭವಿಸಿದ ಕೆಲವು ವಿನ್ಯಾಸ ಮಾರ್ಪಾಡುಗಳಿಂದ ವಿಳಂಬವಾಗಿರುತ್ತದೆ.

ಇ) ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿದ್ದು, ದಿನಾಂಕ: 20–03–2010 ರೊಳಗೆ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು.